# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 615/2015 ಸಿಡಬ್ಲೂ : 4 ಪಿಡಬ್ಲೂಃ 4

ಪ್ರಮಾಣವಚನ ಬೋಧಿಸಲಾಯಿತು ದಿಃ 14-08-2025

ಹೆಸರು : ಸಿದ್ದಾರಾಮೇಶ್ವರ್

ತಂದೆ ಹೆಸರು : ಶಿವಶರಣಪ್ಪ

ವಯಸ್ಸು : 40 ವರ್ಷ

ಉದ್ಯೋಗ : ಪೊಲೀಸ್ ಪೇದೆ, ಸಂಚಾರಿ-2 ಕಲಬುರಗಿ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2010 ರಿಂದ 2015 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವದಿಯಲ್ಲಿ ದಿಃ 24-12-2013 ರಂದು ಮಧ್ಯಾಹ್ನ 12-00 ಗಂಟೆಗೆ ಚಾ ಸಾ 1, 6 ಮತ್ತು 7 ರವರು ಠಾಣೆಗೆ ಬಂದು ಇಮಾಮಿ ಕಂಪನಿಯ ನಕಲಿ ಜಂಡೂಬಾಂಬ್ ಡಬ್ಬಿಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ದೂರು ಸಲ್ಲಿಸಿದ್ದಾರೆ. ನಂತರ ನಾವು ಕರ್ನಾಟಕ ಪ್ರಾವಿಷನ್ ಅಂಗಡಿಗೆ ಹೋಗಿ ವಿಚಾರಿಸಲಾಗಿ ಅದರಲ್ಲಿ ಒಟ್ಟು 360 ನಕಲಿ ಜಂಡೂಬಾಂಬ್ ಡಬ್ಬಿಗಳು ಕಂಡುಬಂದಿಂದ್ದು ಇರುತ್ತದೆ. ಅದರ ಅಂದಾಜು ಕಿಮ್ಮತ್ತು ರೂ.10,530/- ಇರುತ್ತದೆ. ಅದನ್ನು ಜಪ್ತಿ ಪಡಿಸಿಕೊಂಡು ಠಾಣೆಗೆ ತಂದು ಪಿ ಎಸ್ ಐ ಸಾಹೇಬರಿಗೆ ಒಪ್ಪಿ ಸಿದ್ದೇವೆ. ನಂತರ ಪಿ ಎಸ್ ಐ ಸಾಹೇಬರು ಗುನ್ನೆ ದಾಖಲಿಸಿಕೊಂಡಿದ್ದರು. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ವಿ ಜೆ ಎಂ ವಕೀಲರಿಂದಃ

ಜಂಡೂಬಾಂಬ್ ಡಬ್ಬಿಗಳು ನಕಲಿ ಇರುವ ಬಗ್ಗೆ ಹಿಮಾಮಿ ಕಂಪನಿಯ ಸಿಬ್ಬಂದಿಯಾದ ಚಾ ಸಾ 1, 6 ಮತ್ತು 7 ರವರು ಹೇಳಿದರು. ಚಾ ಸಾ 1, 6 ಮತ್ತು 7 ರವರ ಮೊದಲು ಅಂಗಡಿಗೆ ಹೋಗಿ ವಿಚಾರಣೆ ಮಾಡಿ ನಂತರ ಠಾಣೆಗೆ ಬಂದು ದೂರನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಿಲ್ಲ. ನಾವು ಯಾವುದೇ ನಕಲಿ ಜಂಡೂಬಾಂಬ್ ಡಬ್ಬಿಗಳು ಆರೋಪಿತರ ಅಂಗಡಿಯಿಂದ

ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಿಲ್ಲ. ನಾವು 360 ನಕಲಿ ಜಂಡೂಬಾಂಬ್ ಡಬ್ಬಿಗಳು ವಶಕ್ಕೆ ಪಡೆದುಕೊಂಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನನ್ನ ಹೇಳಿಕೆಯಲ್ಲಿ 390 ಡಬ್ಬಿಗಳು ಎಂದು ಬರೆದಿದ್ದಾರೆ ಎಂದರೆ ಸರಿ. ನಾವು ದಾಳಿ ಮಾಡಿದಾಗ ಇಮಾಮಿ ಕಂಪನಿಯವರು 2 ರಿಂದ 3 ಬಾಕ್ಸ್ ಗಳನ್ನು ತೆಗೆದು ನೋಡಿದರು. ದಾಳಿ ಕಾಲಕ್ಕೆ ಇಮಾಮಿ ಕಂಪನಿದವರು ಜಂಡೂಬಾಂಬ್ ಡಬ್ಬಿ ತೆರೆದು ವಾಸನೆ ತೆಗೆದುಕೊಂಡು ನೋಡಿದ್ದಾರೆ. ಜಂಡೂಬಾಂಬ್ ವಾಸನೆಯಿಂದ ಜಂಡೂಬಾಂಬ್ ನಕಲಿಯೋ ಅಥವಾ ಅಸಲಿಯೋ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನಕಲಿ ಇದೆ ಎಂದು ನುಡಿಯುತ್ತಾರೆ. ಜಂಡೂಬಾಂಬ್ ಕವರ್ ಮೇಲೆ ಒರಿಜಿನಲ್ ಮಾರ್ಕ ಇತ್ತು ಎಂದರೆ ಸರಿಯಿಲ್ಲ. ಇಮಾಮಿ ಕಂಪನಿದವರು ನಮಗೆ ಹೇಳಿರುವುದರಿಂದ ನಾನು ಹೇಳುತ್ತಿದ್ದೇನೆ ಆದರೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಿಲ್ಲ. ನಾವು ಆರೋಪಿತರ ಅಂಗಡಿಗೆ ಯಾವಾಗಲೂ ಹೋಗಿಲ್ಲ ಹಾಗೂ ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಿಲ್ಲ. ಇಮಾಮಿ ಕಂಪನಿಯವರು ನಮಗೆ ಬಂದು ಸಹಾಯ ಕೇಳಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲಲ. ನಾನು ಪಿ ಎಸ್ಐ ರವರ ಮಾತನ್ನು ಕೇಳು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**